**All India Radio: Bangalore**
**National Bulletin In Kannada**
**09.07.2025 19.35 p.m.**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**09.07.2025 19.35 p.m.**

**<><><><>**

ಮುಖ್ಯಾಂಶಗಳು

1. ಭಾರತ-ನಮೀಬಿಯಾ ನಡುವೆ ಆರೋಗ್ಯ ಮತ್ತು ಔಷಧ ಕ್ಷೇತ್ರದ ಸಹಕಾರ ಒಪ್ಪಂದಕ್ಕೆ ಸಹಿ
2. ಗುಜರಾತ್‌ನ ವಡೋಧರದಲ್ಲಿ ಸೇತುವೆ ಕುಸಿದು ೯ ಮಂದಿ ಸಾವು
3. ರಾಜಸ್ಥಾನದಲ್ಲಿ ಭಾರತೀಯ ವಾಯುಪಡೆಯ ಜಾಗ್ವಾರ್ ತರಬೇತಿ ವಿಮಾನ ಅಪಘಾತ ; ಇಬ್ಬರ ದುರ್ಮರಣ
4. ಛತ್ತೀಸ್‌ಗಢದಲ್ಲಿ ಈವರೆಗೆ ೧ ಸಾವಿರಕ್ಕೂ ಹೆಚ್ಚು ಮಾವೋವಾದಿಗಳ ಶರಣಾಗತಿ

<><><><>

ಭಾರತ ಮತ್ತು ನಮೀಬಿಯಾ ಇಂದು ನಮೀಬಿಯಾದಲ್ಲಿ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ ಸ್ಥಾಪನೆ ಮತ್ತು ಆರೋಗ್ಯ ಮತ್ತು ಔಷಧ ಕ್ಷೇತ್ರದಲ್ಲಿ ಸಹಕಾರದ ಕುರಿತು ಒಪ್ಪಂದಗಳಿಗೆ ಸಹಿ ಹಾಕಿದವು. ಕೇಂದ್ರೀಯ ಔಷಧ ಸಂಶೋಧನಾ ಸಂಸ್ಥೆ ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟಕ್ಕೆ ನಮೀಬಿಯಾ ಸೇರ್ಪಡೆಗೆ ಸ್ವೀಕಾರ ಪತ್ರಗಳನ್ನು ಸಹ ಪ್ರಸ್ತುತಪಡಿಸಲಾಗಿದೆ. ನಮೀಬಿಯಾ ರಾಜಧಾನಿ ವಿಂಡ್‌ಹೋಕ್‌ನಲ್ಲಿರುವ ಸ್ಟೇಟ್ ಹೌಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ನಮೀಬಿಯಾ ಅಧ್ಯಕ್ಷರ ನಡುವಿನ ನಿಯೋಗ ಮಟ್ಟದ ಮಾತುಕತೆಯ ನಂತರ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ನಿರ್ಣಾಯಕ ಕ್ಷೇತ್ರಗಳಲ್ಲಿ ಸಹಕಾರದ ಹೊಸ ಕ್ಷೇತ್ರಗಳನ್ನು ಅನ್ವೇಷಿಸುವ ಮೂಲಕ ಎರಡೂ ದೇಶಗಳ ನಡುವಿನ ಆರ್ಥಿಕ ಪಾಲುದಾರಿಕೆಯನ್ನು ಗಾಢವಾಗಿಸುವ ಗುರಿಯನ್ನು ಈ ಚರ್ಚೆಗಳು ಹೊಂದಿದ್ದವು. ನಮೀಬಿಯಾ ಅಧ್ಯಕ್ಷರೊಂದಿಗಿನ ಮಾತುಕತೆಯ ಸಂದರ್ಭದಲ್ಲಿ ಭಾರತ-ನಮೀಬಿಯಾ ಸಂಬಂಧಗಳ ಸಂಪೂರ್ಣ ವಿವರಗಳನ್ನು ಪರಿಶೀಲಿಸಿರುವುದಾಗಿ ಪ್ರಧಾನಿ ಮೋದಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಡಿಜಿಟಲ್ ತಂತ್ರಜ್ಞಾನ, ರಕ್ಷಣೆ, ಭದ್ರತೆ, ಕೃಷಿ, ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ನಿರ್ಣಾಯಕ ಖನಿಜಗಳಂತಹ ಕ್ಷೇತ್ರಗಳಲ್ಲಿನ ಸಹಕಾರವು ಚರ್ಚೆಗಳಲ್ಲಿ ಪ್ರಮುಖ ವಿಷಯವಾಗಿತ್ತು ಎಂದು ಅವರು ತಿಳಿಸಿದ್ದಾರೆ. ನಮೀಬಿಯಾ ರಾಷ್ಟ್ರದ ಸ್ಥಾಪಕ ಪಿತಾಮಹ ಸ್ಯಾಮ್ ನುಜೋಮಾ ಅವರಿಗೆ ಪ್ರಧಾನಿ ಮೋದಿ ಗೌರವ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಕೊಡುಗೆಗಳನ್ನು ಗುರುತಿಸಿ ನಮೀಬಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಲಾಯಿತು. ಬಳಿಕ ಪ್ರಧಾನಿಯವರು ನಮೀಬಿಯಾ ಸಂಸತ್ತನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದು ಎರಡೂ ರಾಷ್ಟ್ರಗಳ ನಡುವಿನ ನಿರಂತರ ಸಂಬಂಧದಲ್ಲಿ ಒಂದು ಮಹತ್ವದ ಕ್ಷಣವನ್ನು ಗುರುತಿಸುತ್ತದೆ. ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ದಕ್ಷಿಣ ಆಫ್ರಿಕಾದ ದೇಶಕ್ಕೆ ಮೋದಿಯವರ ಮೊದಲ ಭೇಟಿ ಇದಾಗಿದ್ದು, ಸುಮಾರು ಮೂರು ದಶಕಗಳ ನಂತರ ಭಾರತದಿಂದ ನಮೀಬಿಯಾಕ್ಕೆ ಪ್ರಧಾನಿಯೊಬ್ಬರ ಮೂರನೇ ಭೇಟಿ ಇದಾಗಿದೆ.

<><><>

ಗುಜರಾತ್‌ನ ವಡೋದರಾ ಜಿಲ್ಲೆಯ ಗಂಭೀರಾ ಸೇತುವೆಯ ಒಂದು ಭಾಗವು ಇಂದು ಬೆಳಿಗ್ಗೆ ಕುಸಿದಿದ್ದು, ಈ ದುರಂತ ಘಟನೆಯಲ್ಲಿ ಐದು ವಾಹನಗಳು ಮಹಿಸಾಗರ್ ನದಿಗೆ ಉರುಳಿ ಒಂಬತ್ತು ಜನರು ಸಾವನ್ನಪ್ಪಿದ್ದಾರೆ. ವಡೋದರಾ ಜಿಲ್ಲಾಡಳಿತ ಸೇರಿದಂತೆ ಸ್ಥಳೀಯ ಅಧಿಕಾರಿಗಳು ತಕ್ಷಣವೇ ದೊಡ್ಡ ಪ್ರಮಾಣದ ರಕ್ಷಣಾ ಪ್ರಯತ್ನವನ್ನು ಪ್ರಾರಂಭಿಸಿದರು. ಸೇತುವೆ ಕುಸಿತದ ಘಟನೆಯ ತನಿಖೆಗೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಆದೇಶಿಸಿದ್ದಾರೆ. ಗಾಂಧಿನಗರದಲ್ಲಿ ಇಂದು ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚಿಸಲಾಯಿತು.

<><><>

ಮೈಸೂರು ದಸರಾ ಉತ್ಸವದಲ್ಲಿ ವೈಮಾನಿಕ ಪ್ರದರ್ಶನ ಹಾಗೂ ಬೆಂಗಳೂರಿನಲ್ಲಿ ಡಿಫೆನ್ಸ್ ಕಾರಿಡಾರ್ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ರಕ್ಷಣಾ ಇಲಾಖೆಯ ಜಾಗ ನೀಡುವ ಸರ್ಕಾರದ ಮನವಿಗಳಿಗೆ ಕೇಂದ್ರ ರಕ್ಷಣಾ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಇಂದು ರಕ್ಷಣಾ ಸಚಿವ ರಾಜನಾಥಸಿಂಗ್ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉತ್ತರಪ್ರದೇಶ ಹಾಗೂ ತಮಿಳುನಾಡು ಮಾದರಿಯಲ್ಲಿ ಕರ್ನಾಟಕದಲ್ಲಿಯೂ ರಕ್ಷಣಾ ಕಾರಿಡಾರ್ ಸ್ಥಾಪನೆ ಹಾಗೂ ಸುರಂಗ ಮಾರ್ಗ ಯೋಜನೆ, ಬಳ್ಳಾರಿ ರಸ್ತೆಯಲ್ಲಿ ಲಿಂಕ್ ರೋಡ್ ಯೋಜನೆ, ಡಬಲ್ ಡೆಕ್ಕರ್ ಫ್ಲೈಓವರ್ ಯೋಜನೆಯ ನಿರ್ಮಾಣಕ್ಕೆ ಅವಶ್ಯವಿರುವ ಕೇಂದ್ರ ರಕ್ಷಣಾ ಇಲಾಖೆಗೆ ಸೇರಿದ ಜಾಗವನ್ನು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ನೀಡುವಂತೆ ಕೋರಿ ಮನವಿ ಸಲ್ಲಿಸಿರುವ ಬಗ್ಗೆ ವಿವರಿಸಿದರು.

<><><>

ರಾಜಸ್ಥಾನದ ಚುರು ಜಿಲ್ಲೆಯ ಬಳಿ ಇಂದು ಭಾರತೀಯ ವಾಯುಪಡೆಯ ವಿಮಾನ ಅಪಘಾತಕ್ಕೀಡಾಗಿದೆ. ರಾಜಲ್ದೇಸರ್ ಪೊಲೀಸ್ ಠಾಣೆ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಸ್ಥಳದಿಂದ ಎರಡು ಸುಟ್ಟ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುರು ಪೊಲೀಸ್ ವರಿಷ್ಠಾಧಿಕಾರಿ ಜೈ ಯಾದವ್ ತಿಳಿಸಿದ್ದಾರೆ. ಯಾವುದೇ ನಾಗರಿಕ ಸಾವುನೋವುಗಳು ವರದಿಯಾಗಿಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ. ಭಾರತೀಯ ವಾಯುಪಡೆಯ ಜಾಗ್ವಾರ್ ತರಬೇತಿ ವಿಮಾನ ಅಪಘಾತಕ್ಕೆ ಕಾರಣವನ್ನು ಕಂಡುಹಿಡಿಯಲು ತನಿಖಾ ನ್ಯಾಯಾಲಯವನ್ನು ರಚಿಸಲಾಗಿದೆ. ದಿನನಿತ್ಯದ ತರಬೇತಿ ಕಾರ್ಯಾಚರಣೆಯ ಸಮಯದಲ್ಲಿ ವಿಮಾನ ಅಪಘಾತಕ್ಕೀಡಾಗಿತ್ತು.

<><><>

ಅಂತಾರಾಷ್ಟ್ರೀಯ ಸಹಕಾರಿ ವರ್ಷದ ಸಂದರ್ಭದಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಗುಜರಾತ್, ಮಧ್ಯಪ್ರದೇಶ ಮತ್ತು ರಾಜಸ್ಥಾನದ ಸಹಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಮಹಿಳೆಯರು ಮತ್ತು ಇತರ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು. ಕಚ್ ಜಿಲ್ಲೆಯ ಕ್ಯಾಮೆಲ್ ಬ್ರೀಡರ್ ಮಾಲ್ಧಾರಿ ಸಹಕಾರಿ ಸಂಘದ ಮಿರಾಲ್ಬೆನ್ ರಬಾರಿ ಅವರೊಂದಿಗೆ ಅವರು, ಸಂವಾದ ನಡೆಸಿದರು. ಒಂಟೆ ಹಾಲಿನ ರಾಸಾಯನಿಕ ಪರೀಕ್ಷೆ ಹಾಗೂ ಸಂಶೋಧನೆ ನಡೆಸುವಂತೆ ಮಿರಾಲ್ಬೆನ್ ಸಲಹೆಗೆ ನಾಲ್ಕು ಆಯುರ್ವೇದ ಕಂಪನಿಗಳು ಒಂಟೆ ಹಾಲಿನ ಔಷಧೀಯ ಗುಣಗಳನ್ನು ಪರೀಕ್ಷಿಸುತ್ತಿವೆ ಎಂದು ಅಮಿತ್ ಶಾ ಉತ್ತರಿಸಿದರು.

<><><>

ಛತ್ತೀಸ್‌ಗಢದ ಉಗ್ರವಾದ ನಿಗ್ರಹ ಮತ್ತು ಪುನರ್ವಸತಿ ಪ್ರಯತ್ನಗಳಿಗೆ ಒಂದು ಹೆಗ್ಗುರುತು ಸಾಧನೆಯಾಗಿ, ರಾಜ್ಯದ ಪ್ರಮುಖ 'ಲೋನ್ ವರತು' ಅಭಿಯಾನದಡಿಯಲ್ಲಿ ೧ ಸಾವಿರಕ್ಕೂ ಹೆಚ್ಚು ಮಾವೋವಾದಿಗಳು ಶರಣಾಗಿದ್ದಾರೆ ಎಂದು ದಂತೇವಾಡ ಪೊಲೀಸರು ಹೇಳಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜೂನ್ ೨೦೨೦ ರಲ್ಲಿ ಪ್ರಾರಂಭವಾದ ಈ ಉಪಕ್ರಮವು ಈಗ ಐತಿಹಾಸಿಕ ಮೈಲಿಗಲ್ಲನ್ನು ದಾಟಿದೆ, ೧ ಸಾವಿರದ ೫ ಮಾಜಿ ಮಾವೋವಾದಿಗಳು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಮುಖ್ಯವಾಹಿನಿಯ ಸಮಾಜಕ್ಕೆ ಮತ್ತೆ ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಲ್ಲಿಯವರೆಗೆ ಶರಣಾದ ೧ ಸಾವಿರದ ೫ ಜನರಲ್ಲಿ ೮೧೩ ಪುರುಷರು ಮತ್ತು ೧೯೨ ಮಹಿಳೆಯರು ಸೇರಿದ್ದಾರೆ.

<><><><>

ಖೇಲೋ ಭಾರತ್ ನೀತಿ-೨೦೨೫ರ ಅಡಿಯಲ್ಲಿ, ಸರ್ಕಾರವು ಪ್ರತಿಭೆಗಳನ್ನು ಶೋಧಿಸಲು ಹಾಗೂ ವಿಶ್ವ ದರ್ಜೆಯ ತರಬೇತಿ ಮತ್ತು ಸಮುದಾಯದ ಭಾಗವಹಿಸುವಿಕೆಯ ಮೂಲಕ ಅದನ್ನು ಉಳಿಸಿಕೊಳ್ಳಲು ಬೇಕಾದ ಪರಿಸರ ನಿರ್ಮಿಸುತ್ತಿದೆ ಎಂದು ಯುವ ವ್ಯವಹಾರಗಳು ಮತ್ತು ಕ್ರೀಡಾ ರಾಜ್ಯ ಸಚಿವೆ ರಕ್ಷಾ ಖಡ್ಸೆ ಹೇಳಿದ್ದಾರೆ. ಇಂದು ಉತ್ತರ ಪ್ರದೇಶದ ಮೋದಿನಗರದಲ್ಲಿರುವ ವೇಟ್‌ಲಿಫ್ಟಿಂಗ್ ವಾರಿಯರ್ಸ್ ಅಕಾಡೆಮಿಗೆ ಭೇಟಿ ನೀಡಿ, ಯುವ ಕ್ರೀಡಾಪಟುಗಳು ಮತ್ತು ತರಬೇತುದಾರರನ್ನು ಉದ್ದೇಶಿಸಿ ಮಾತನಾಡಿದ ಖಡ್ಸೆ ಅವರು, ಸರ್ಕಾರವು ಪ್ರತಿಯೊಂದು ಪ್ರತಿಭೆಯನ್ನು ಬೆಳಕಿಗೆ ತರಲು ಹಾಗೂ ಅವರ ಆಕಾಂಕ್ಷೆಯನ್ನು ಪೂರೈಸಲು ಬದ್ಧವಾಗಿದೆ ಎಂದು ತಿಳಿಸಿದ್ದಾರೆ.

<><><><>

ರೈತರ ನಿಜವಾದ ಬೇಡಿಕೆ ಪೂರೈಸಲು ತೆಲಂಗಾಣ ಸರ್ಕಾರಕ್ಕೆ ಎಲ್ಲಾ ಬೆಂಬಲ ನೀಡುವುದಾಗಿ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಜೆ.ಪಿ. ನಡ್ಡಾ ಭರವಸೆ ನೀಡಿದ್ದಾರೆ. ನವದೆಹಲಿಯಲ್ಲಿ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ, ನಡ್ಡಾ ಅವರನ್ನು ಭೇಟಿಯಾದ ಸಂದರ್ಭದಲ್ಲಿ ರಾಜ್ಯದಲ್ಲಿ ರಸಗೊಬ್ಬರಗಳ ಲಭ್ಯತೆಯ ಬಗ್ಗೆ ಚರ್ಚಿಸಿದರು. ಖಾರಿಫ್ ಋತುವಿನ ಗರಿಷ್ಠ ಮಟ್ಟವನ್ನು ಪೂರೈಸಲು ಜುಲೈ ಮತ್ತು ಆಗಸ್ಟ್ ತಿಂಗಳುಗಳಿಗೆ ನಿರಂತರ ಯೂರಿಯಾ ಪೂರೈಕೆಗೆ ಮುಖ್ಯಮಂತ್ರಿ ವಿನಂತಿಸಿದ್ದರು. ಸಭೆಯಲ್ಲಿ, ತೆಲಂಗಾಣದಲ್ಲಿ ಯೂರಿಯಾದ ಹೆಚ್ಚುವರಿ ಬಳಕೆ ಮಣ್ಣಿನ ದೀರ್ಘಕಾಲೀನ ಆರೋಗ್ಯಕ್ಕೆ ಹಾನಿಕಾರಕವಾಗಿದೆ ಎಂದು ನಡ್ಡಾ ಕಳವಳ ವ್ಯಕ್ತಪಡಿಸಿದರು.

<><><><>

ಕೇಂದ್ರ ತನಿಖಾ ದಳ-ಸಿಬಿಐ, ಅಮೆರಿಕದಲ್ಲಿ ಆರ್ಥಿಕ ಅಪರಾಧಿ ಮೋನಿಕಾ ಕಪೂರ್ ಅವರನ್ನು ವಶಕ್ಕೆ ಪಡೆದುಕೊಂಡಿದ್ದು, ಇಂದು ಅವರನ್ನು ಭಾರತಕ್ಕೆ  ಕರೆತರಲಾಗುತ್ತಿದೆ. ಕಪೂರ್ ಮೇಲೆ ೨೦೦೨ ರ ಆಮದು-ರಫ್ತು ವಂಚನೆಯ ಆರೋಪವಿದೆ ಮತ್ತು ಅಂದಿನಿಂದ ಅವರು ತಲೆಮರೆಸಿಕೊಂಡಿದ್ದರು. ಆಪಾದಿತ ವಂಚನೆಯ ನಂತರ ಪರಾರಿಯಾಗಿದ್ದ ಮೋನಿಕಾ ಕಪೂರ್ ೧೯೯೯ ರಲ್ಲಿ ಅಮೆರಿಕಕ್ಕೆ ಹೋಗಿದ್ದರು, ಅಲ್ಲಿ ಅವರು ತಮ್ಮ ಇಬ್ಬರು ಸಹೋದರರೊಂದಿಗೆ ಆಭರಣ ವ್ಯವಹಾರಕ್ಕಾಗಿ ನಕಲಿ ದಾಖಲೆಗಳನ್ನು ರಚಿಸಿದ್ದರು. ಈ ದಾಖಲೆಗಳನ್ನು ಭಾರತ ಸರ್ಕಾರದಿಂದ ಸುಂಕ ರಹಿತ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಪರವಾನಗಿಗಳನ್ನು ಪಡೆಯಲು ಬಳಸಲಾಗಿದೆ ಎಂದು ಸಿಬಿಐ ಹೇಳಿಕೆಯಲ್ಲಿ ತಿಳಿಸಿದೆ.

<><><>

ದೇಶದ ಪಶ್ಚಿಮ ಭಾಗವನ್ನು ಗುರಿಯಾಗಿಸಿಕೊಂಡು ರಾತ್ರಿಯಿಡೀ ನಡೆಸಿದ ದಾಳಿಯಲ್ಲಿ ರಷ್ಯಾದ ಪಡೆಗಳು ಸುಮಾರು ೭೫೦ ಡ್ರೋನ್‌ಗಳು ಮತ್ತು ಕ್ಷಿಪಣಿಗಳನ್ನು ಹಾರಿಸಿವೆ ಎಂದು ಉಕ್ರೇನ್ ಇಂದು ಹೇಳಿದೆ. ಉಕ್ರೇನಿಯನ್ ವಾಯುಪಡೆಯು ೭೧೧ ಡ್ರೋನ್‌ಗಳು ಮತ್ತು ಕನಿಷ್ಠ ಏಳು ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಹೇಳಿಕೊಂಡಿದೆ. ದಾಳಿಗಳು ಮುಖ್ಯವಾಗಿ ಉಕ್ರೇನ್‌ನ ಪಶ್ಚಿಮ ವೊಲಿನ್ ಪ್ರದೇಶವನ್ನು ಗುರಿಯಾಗಿಸಿಕೊಂಡಿವೆ. ಅದರ ರಾಜಧಾನಿ ಲುಟ್ಸ್ಕ್ ಪೋಲೆಂಡ್ ಮತ್ತು ಬೆಲಾರಸ್‌ನ ಗಡಿಯಾಗಿದೆ. ಕೈವ್‌ಗೆ ವಾಯು-ರಕ್ಷಣಾ ಶಸ್ತ್ರಾಸ್ತ್ರಗಳ ವಿತರಣೆಯನ್ನು ವಿರಾಮಗೊಳಿಸುವ ಇತ್ತೀಚಿನ ನಿರ್ಧಾರವನ್ನು ಅಮೆರಿಕ ಹಿಮ್ಮೆಟ್ಟಿಸುವುದಾಗಿ ಘೋಷಿಸಿದ ನಂತರ ಉಕ್ರೇನ್ ಮೇಲೆ ರಷ್ಯಾ ರಾತ್ರಿಯಿಡೀ ನಡೆಸಿದ ಬೃಹತ್ ದಾಳಿಗಳು ಬಂದಿವೆ.

<><><>

ಶೈಕ್ಷಣಿಕ ಜ್ಞಾನವನ್ನು ಸಾಮಾಜಿಕ ಒಳಿತಿನೊಂದಿಗೆ ಒಟ್ಟುಗೂಡಿಸುವ ಮತ್ತು ಸಮಾಜದ ಆಕಾಂಕ್ಷೆಗಳು ಮತ್ತು ಇಂಧನ ಅಗತ್ಯಗಳನ್ನು ಪೂರೈಸುವ ಸ್ಮಾರ್ಟ್ ತಂತ್ರವನ್ನು ಭಾರತ ರಚಿಸಬೇಕು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ನವದೆಹಲಿಯಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ದೆಹಲಿ ಆಯೋಜಿಸಿದ್ದ "ಭವಿಷ್ಯದ ಸಿದ್ಧ ಇಂಧನ ಶಿಕ್ಷಣ ಅವಕಾಶಗಳು ಮತ್ತು ಸವಾಲುಗಳು" ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅವರು, ೨೦೭೦ ರ ವೇಳೆಗೆ ಭಾರತವು ನಿವ್ವಳ-ಶೂನ್ಯ ಬದ್ಧತೆಯನ್ನು ಸಾಧಿಸುವತ್ತ ಸಾಗುತ್ತಿದೆ ಎಂದು ಹೇಳಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>